# ನಾ ನಿನಗೇನ ಬೇಡುವದಿಲ್ಲ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 94.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 251.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 316.
4. **Note:** This is not available in the books of Sri S.K. Ramachandra Rao.
5. **Note:** Lyrics mentioned without highlights are as per Ref. 1. The wordings in Ref. 2 are same as in Ref. 1. The wordings in Ref. 3 are different and are given separately in yellow highlights.
6. **Note:** As per my observation, lyrics in Ref. 3 are not fully correct. It is better follow lyrics as in Ref. 1.
7. **Note:** There is a similar song by Sripadarajaru. Researchers should check this. Many singers have followed this as that of Sripadarajaru.

ರಾಗ: ನಾದನಾಮಕ್ರಿಯೆ ತಾಳ: ಅಟ

ನಾ ನಿನಗೇನ ಬೇಡುವದಿಲ್ಲ
ಎನ್ನ ಹೃದಯಕಮಲದೊಳು ನೆಲಸಿರು ಹರಿಯೆ ॥ ಪ ॥

ಶಿರ ನಿನ್ನ ಚರಣಕೆರಗಲಿ, ಚಕ್ಷು
ಎರಕದಿಂದಲಿ ನಿನ್ನ ನೋಡಲಿ, ಹರಿಯೆ
ನಿರುಮಾಲ್ಯ ನಾಸ ಘ್ರಾಣಿಸಲಿ, ಎನ್ನ
ಕರಣ ಗೀತಂಗಳ ಕೇಳಲಿ, ಹರಿಯೆ ॥ 1 ॥

ನಾಲಗೆ ನಿನ್ನ ಕೊಂಡಾಡಲಿ, ಎನ್ನ
ತೋಳು ಕರಂಗಳ ಮುಗಿಯಲಿ, ಹರಿಯೆ
ಕಾಲು ತೀರ್ಥಯಾತ್ರೆಗೆ ಪೋಗಲಿ, ಮನ
ಒಲೈಸಿ ನಿನ್ನನು ಸ್ಮರಿಸಲಿ, ಹರಿಯೆ ॥ 2 ॥

ಚಿತ್ತ ನಿನ್ನೊಳು ಮುಳುಗಾಡಲಿ, ನಿನ್ನ
ಭಕ್ತಜನರ ಸಂಗ ದೊರಕಲಿ, ಹರಿಯೆ
ತತ್ತ್ವಯೋಗಭ್ಯಾಸಕ್ಕಾಗಲಿ, ಉಕ್ತಿ
ಸತ್ಯಮೂರುತಿ ನಮ್ಮ ಪುರಂದರವಿಠಲ ॥ 3 ॥

**Note:** Below given lyrics, in yellow highlights, are as per Ref. 3. These are slightly different.

ರಾಗ: ಪೂರ್ವಿ ತಾಳ: ಅಟ

ನಾ ನಿನ್ನೊಳನ್ಯ ಬೇಡುವದಿಲ್ಲ, ಎನ್ನ
ಹೃದಯ ಕಮಲದೊಳು ನಿಂದಿರು ಹರಿಯೆ ॥ ಪ ॥

ಶಿರ ನಿನ್ನ ಚರಣಕೆ ಎರಗಲಿ, ಎನ್ನ
ಚಕ್ಷು ಸದಾ ನಿನ್ನ ನೋಡಲಿ ಹರಿಯೆ
ಕರ್ಣ ಗೀತಂಗಳ ಕೇಳಲಿ ನಿನ್ನ
ನಿರ್ಮಾಲ್ಯವ ನಾಸವಾಘ್ರಾಣಿಸಲಿ ಹರಿಯೆ ॥ 1 ॥

ನಾಲಿಗೆ ನಿನ್ನ ಕೊಂಡಾಡಲಿ, ಎನ್ನ
ಕರಗಳೆರಡು ನಿನ್ನನರ್ಚಿಸಲಿ ಹರಿಯೆ
ಚರಣ ತೀರ್ಥಯಾತ್ರೆ ಮಾಡಲಿ, ಎನ್ನ
ಮನ ನಿನ್ನ ಅನುದಿನ ಸ್ಮರಿಸಲಿ ಹರಿಯೆ ॥ 2 ॥

ಬುದ್ದಿ ನಿನ್ನೊಳು ಬೆರೆತ್ಹೋಗಲಿ, ಎನ್ನ
ಚಿತ್ತ ನಿನ್ನೊಳು ಸ್ಥಿರವಾಗಲಿ ಹರಿಯೆ
ಭಕ್ತ ಜನರ ಸಂಗವಾಗಲಿ, ಪುರಂ-
ದರ ವಿಠಲನೆ ಇಷ್ಟೇ ದಯಮಾಡೋ ಹರಿಯೆ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಎರಕ** = ಪ್ರೀತಿ

**ನಿರುಮಾಲ್ಯ (ನಿರ್ಮಾಲ್ಯ)** = ದೇವರ ಮೇಲೆ ಏರಿಸಿ ತೆಗೆದ ಹೂವು

**ಕರಣ** = ಕಿವಿ, ಕರ್ಣ

**ಒಲೈಸಿ** = ಒಲಿದು ಅನುಸರಿಸಿ

**ತತ್ವ ಯೋಗಾಭ್ಯಾಸಕ್ಕಾಗಲಿ .... ಉಕ್ತಿ : -** ನನ್ನ ಮಾತುಗಳೆಲ್ಲ ತತ್ವಯೋಗದ (ವೇದಾಂತದ) ಅಭ್ಯಾಸದಲ್ಲಿ ತೊಡಗಲಿ

**Classification:** Keerthane
**Ankita:** Purandara Vittala
**Location:** NA
**Category:** Pooja Tatva,
**Sub-Category:** hrudaya, padma, Krishna, kannu, nirmalya, moogu, kivi, nalige, kai, tirthayaatre, mana, olume, smarane, chitta, jana, satya,
**Pravachana:** NA
**Explanation:** NA